ತುಂಡವನ್ನು ಪಳಗಿಸಿ ರಾಗಿ ಬಿತ್ತಿದ. ಆಗತಾನೆ ಬಂದಿದ್ದ ಇಂಡಾಫ್ ತಳಿಯ ರಾಗಿಯಾದ್ದರಿಂದ ಸುಮಾರು ಒಂದು ಎಕರೆ ಇದ್ದ ದೊಡ್ಡ ತುಂಡದಲ್ಲಿ ಹತ್ತು ಮೂಟೆ ಫಸಲು ಒದಗತೊಡಗಿತು. ಎಕರೆಗೆ ಐದಾರು ಮೂಟೆ ರಾಗಿ ಬೆಳೆಯಲು ಯಣಗುತ್ತಿದ್ದ ಸುತ್ತ ಮುತ್ತಲಿನ ರೈತರೆಲ್ಲಾ ದೇವರ ರಾಗಿಯನ್ನು ಬಿತ್ತನೆಗೆಂದೇ ಕೊಳ್ಳುತ್ತಿದ್ದರು. 'ನಿಮ್ಮ ಹೊಲ ನಿಮ್ಮ ಮನಸ್ಸಿನಂಗೇ ಕೈತುಂಬಾ ಕೊಡ್ತದೆ' ಅಂತ ಭರಮಪ್ಪ ಗೌಡರ ಮುಂದೆ ಹೇಳುತ್ತಿದ್ದರೂ ಅದೊಂದು ತುಂಡ ತನ್ನದೇ ಆಗಬಾರದಿತ್ತಾ ಅಂದುಕೊಳ್ಳುತ್ತಿದ್ದ ದೇವರು. ಗೌಡರು ಕುಡಿದ ಅಮಲಿನಲ್ಲಿ, 'ಕಾಗದ ತಗಂಡು ಬಾರೋ ದೇವ್ರೇ ಕೆಳಗಿನ್ ತುಂಡಾ ನಿನ್ನೆಸ್ರಿಗೇ ಬರ್ಕೊಟ್ ಬಿಡ್ತೀನಿ' ಅಂದಹಾಗೆ ಕನಸು ಕಾಣುತ್ತಿದ್ದ.

ಲಂಕೆಪ್ಪನವರು ಕವಿ ಸಿದ್ಧಲಿಂಗಯ್ಯ ಎಂಎಲ್‌ಸಿ ಆದ ವರ್ಷ ದೇವರಿಗೆ ಮದುವೆ ಮಾಡಿಸಿದ್ದು ಚರಿತ್ರಾರ್ಹ ಸಂಗತಿ. ಭರಮಪ್ಪಗೌಡರ ಜತೆ ರೈತಸಂಘದ ಅನಿರ್ದಿಷ್ಟಾವಧಿ ಪ್ರತಿಭಟನಾ ಧರಣಿಗೆಂದು ಬೆಂಗಳೂರಿಗೆ ಹೋದ ದೇವರು ಧರಣಿ ಶುರುವಾದ ಮೂರನೇ ದಿನ ತನಗಿಂತಲೂ ಐದಾರು ವರ್ಷ ದೊಡ್ಡವಳಾದ ಒಬ್ಬ ಹುಡುಗಿಯ ಜೊತೆ ಗೌಡರ ಮುಂದೆ ನಿಂತಿದ್ದ. ಭಾಷಣಗಳು ಬೇಸರವಾಗಿ ಬೀಡಿ ಹುಡುಕಿಕೊಂಡು ಧರಣಿ ನಡೆಯುತ್ತಿದ್ದ ಬನ್ನಪ್ಪ ಪಾರ್ಕಿನ ಪಕ್ಕದ ರಸ್ತೆಯಲ್ಲಿ ಹಾಗೇ ಅವೆನ್ಯೂ ರೋಡಿನ ಕಡೆಗೆ ನಡೆದುಕೊಂಡು ಹೋದ ದೇವರು ಬಳೆಪೇಟೆಯ ಗಲ್ಲಿಯೊಂದರಲ್ಲಿ ದಾರಿತಪ್ಪಿದ. ಬೀಡಿಯೂ ಸಿಗದೆ, ಹಾದಿಯೂ ಸಿಗದೆ ಆಕಾಶ ನೋಡುತ್ತಾ ನಿಂತವನಿಗೆ ಮಾರ್ವಾಡಿಯೊಬ್ಬನ ಕೂಗಾಟ ಕೇಳಿಸಿತು. ಅವನ ಮನೆಯ ಜಗಲಿಯಲ್ಲಿ ಕೂತ ಹುಡುಗಿಯೊಬ್ಬಳು ಬೀಡಿ ಸೇದುತ್ತಾ ಬಿಡುತ್ತಿದ್ದ ಹೊಗೆ ಆ ಮನೆಯ ಕಿಟಕಿಯೊಳಗೆ ನುಗ್ಗಿ ಮನೆಯ ಯಜಮಾನನಿಗೆ ಸಿಟ್ಟು ತರಿಸಿತ್ತು. ಅವನು ಬೀಡಿಯ ಹೊಗೆಯ ಕಾರಣಕ್ಕಲ್ಲದೆ ಹುಡುಗಿಯೊಬ್ಬಳು ಬೀಡಿ ಸೇದುತ್ತಿದ್ದ ಕಾರಣಕ್ಕೆ ವ್ಯಗ್ರಗೊಂಡಂತಿದ್ದ. ಹೊರಗೆ ಬಂದು ಕೂಗಾಡಿದವನೆದುರು ನಿಂತು, 'ನಿನ್ ಮನೆ ಒಳಗೆ ಬಂದು ಹೊಗೆ ಬಿಡ್ತಿದ್ದೇನಲೇ ಬಾಂಚತ್...' ಎಂದು ಜಗಳಕ್ಕೆ ನಿಂತಿದ್ದ ಆ ಹುಡುಗಿ ದೇವರ ಕಣ್ಣಿಗೆ ಸಾಕ್ಷಾತ್ ಕೋಪಗೊಂಡ ದಕ್ಕಲದೇವಿಯ ಹಾಗೆ ಕಂಡಳು. ಮಾರ್ವಾಡಿ ಕೂಗಾಡುತ್ತಾ ಹೊರಗೆ ಬರುವುದಕ್ಕೂ ದೇವರು ಆ ಜಾಗ ತಲುಪುವುದಕ್ಕೂ ಒಂದೇ ಆಯಿತು. ಇವನನ್ನು ನೋಡಿದ ಮಾರ್ವಾಡಿಯು, 'ಗಂಡ ಹೆಂಡ್ರು ಸೇರ್ಕಂಡಿ ರಾತ್ರೆ ಹೊತ್ತು ಕಳ್ಳತನ ಮಾಡಕೆ ಪ್ಲಾನ್ ಮಾಡ್ತಿದಿರೇನೋ ಬಾಡ್ಕೋ... ಅದೂ ನನ್ ಮನೆ ಹತ್ರ ನಿಂತ್ಕಂಡು ಬೀಡಿ ಸೇದಿ ಹೊಗೆ ಬಿಡೋದಲ್ಲದೆ ಕೆಟ್ಟ ಭಾಷೆಲ್ಲಿ ನನಗೇ ಬೈತೀರಾ... ಪೊಲೀಸರಿಗೆ ಒಪ್ಪಿಸಿದ್ರೆ ಬುದ್ಧಿ ಕಲಿತಿರಾ ಇರಿ ನೀವು' ಅಂದು ಸುತ್ತ ಮುತ್ತಲಿನ ಬಳಗವನ್ನು ಸೇರಿಸತೊಡಗಿದ.

ದೇವರಿಗೆ ಬೀಜ ಬಾಯಿಗೆ ಬಂದ ಹಾಗಾಯ್ತು. ನೋಡು ನೋಡುತ್ತಿದ್ದಂತೆ ಗಲಾಟೆ ಜೋರಾಯ್ತು. 'ಕರ್ಸಲೇ ಬೋಸುಡಿಕೆ ಪೋಲೀಸ್ರುನ್ನ.. ನಾನೂ ನೋಡ್ತಿನಿ' ಅಂತ ಕಚ್ಚೆ ಕಟ್ಟಿ ನಿಂತ ಆ ಹುಡುಗಿಯನ್ನು ನೋಡಿ ದೇವರಿಗೆ ಮಾತೇ ಹೊರಡಲಿಲ್ಲ. ಅಷ್ಟರಲ್ಲಿ ಯಾರೋ, 'ಹೇ ಕರ್ಕಂಡೋಗಪ್ಪ ನಿನ್ ಹೆಂಡ್ರುನಾ' ಅಂದ್ರು. ದೇವರಿಗೆ ಕಷ್ಟಕ್ಕಿಟ್ಟುಕೊಂಡಿತು. ಪಿಳಿಪಿಳಿ ಕಣ್ಣುಬಿಟ್ಟುಕೊಂಡು ನೋಡುತ್ತಾ ನಿಂತ. ಜಗಳ ನೋಡುತ್ತಾ ನಿಂತ ಹಣ್ಣಿನ ವ್ಯಾಪಾರ ಮಾಡುತ್ತಿದ್ದ ಹೆಂಗಸೊಬ್ಬರು ದೇವರ ಹತ್ತಿರ ಬಂದು, 'ಈ ಜನ ಸರಿಯಿಲ್ಲ ಕಣಪ್ಪ; ಕರ್ಕಂಡು ಹೋಗ್ಬುಡು; ಆಮೇಲ್ ಪೊಲೀಸ್ರು ಬಂದ್ರೆ ಎಳ್ಕಂಡೋಗ್ತಾರೆ' ಅಂದರು. ಇವನು ಧೈರ್ಯ ಮಾಡಿ ಆ ಹುಡುಗಿಯ ಹತ್ತಿರ ಹೋಗಿ 'ಬಾ ಹೋಗನ' ಅಂದ. ಅವಳು ವಿಚಿತ್ರವಾಗಿ ಇವನ ಮುಖ ನೋಡಿದವಳೇ, 'ಓ... ಗಂಡಾ' ಅಂದು ಜೋರಾಗಿ ನಕ್ಕಳು. ದೇವರಿಗೆ ಏನನ್ನಿಸಿತೋ ಅವಳ ಕೈಹಿಡಿದುಕೊಂಡು ದರದರ ಎಳೆದುಕೊಂಡು ಹೊರಟ. ಅವಳಿದನ್ನು ನಿರೀಕ್ಷಿಸಿರದ ಕಾರಣ ಮಾತು ಹೊರಡಲಿಲ್ಲ. ಎಳೆದುಕೊಂಡು ಪಕ್ಕದ ಬೀದಿಗೆ ಬಂದು ನಿಂತವನು ಹಿಡಿದಿದ್ದ ಕೈ ಬಿಟ್ಟು ದೂರದಲ್ಲಿ ಕಾಣಿಸಿದ ಗೂಡಂಗಡಿ ಕಡೆಗೆ ನಡೆದ. ಆ ಕ್ಷಣದಲ್ಲಿ ಅವನಿಗೆ ಬೀಡಿಯೂ ಸಿಕ್ಕಿದ್ದರಿಂದ ಅವಳನ್ನು ಬಿಟ್ಟು ಹಾಗೇ ಹೋಗಿಬಿಡಬೇಕೆನ್ನಿಸಿದರೂ ಅದ್ಯಾಕೋ ಮತ್ತೆ ಹಿಂದಕ್ಕೆ ಬಂದ. 'ಬೆಂಗ್ಳೂರಾ ನಿಂದು' ಎಂದು ಕೇಳಿದವನಿಗೆ ಅವಳು, 'ಅಲ್ಲ ಬೆಂಗಳೂರು ನಂದೇ' ಅಂದು ನಕ್ಕಳು. 'ಯಂಗಾದ್ರೂ ಹಾಳೋಗೋಗು' ಅಂದವನೇ ಯಾವುದೋ ಸಂದಿಯೊಳಗೆ ನುಗ್ಗಲು ಪ್ರಯತ್ನಿಸಿದ.